International Journal of Advance and Applied Research (IJAAR)
Peer Reviewed Bi-Monthly

ISSN – 2347-7075
Impact Factor – 0.899
Vol.5 No.2 Nov–Dec 2017

# ಶರಣರ ದೃಷ್ಟಿಯಲ್ಲಿ ಕಾಯಕ ಪ್ರಜ್ಞೆ

**ಬಸವರಾಜ ಎಂ.ಕೊನೇರಿ**

ಕನ್ನಡ ಸಹಾಯಕ ಪ್ರಾಧ್ಯಾಪಕರು, ಸ.ಪ್ರ.ದ.ಕಾಲೇಜು, ಸೇಡಂ

ಶರಣರು 'ಕಾಯಕ' ಪರಿಕಲ್ಪನೆಯನ್ನು ಹೊಸದಾಗಿ ತಂದರು. ಅಂದರೆ ಶರಣರಿಗಿಂತ ಪೂರ್ವದಲ್ಲಿ ದುಡಿಮೆಯೇ ಇರಲಿಲ್ಲವೇ ಇತ್ತು ಅಂದಮೇಲೆ 'ದುಡಿಮೆ' ಎಂದ ಹೇಳಬಹುದಾಗಿತ್ತಲ್ಲ ಶರಣರು ಕಾಯಕ ಎಂದು ಏಕೆ ಹೇಳಿದರು? ಎಂಬ ಪ್ರಶ್ನೆ ಸಹಜವಾದುದು- ಆದರೆ ಶರಣರು ಆಲೋಚನೆಯ ವಿಧಾನ, ಚಿಂತನೆ ಶೀಲತೆಯ ಕ್ರಮವೇ ಭಿನ್ನವಾದುದು. ಒಂದು ಪರಿಕಲ್ಪನೆ ಸಿದ್ಧಾಂತವಾಗಿ ಮಾರ್ಪಾಡುವಷ್ಟರ ಮಟ್ಟಿಗೆ ಅವರ ಅಧ್ಯಯನದ ವ್ಯಾಪ್ತಿಯಿದೆ. ಕಾಯಕಕ್ಕೆ ತಮ್ಮದೆ ಆದ ವ್ಯಾಖ್ಯೆಯನ್ನು ಕೊಟ್ಟರು ವಿವರಣೆ ನೀಡಿದರು ಹಲವು ಹತ್ತು ರೀತಿಯ ವಿಚಾರಗಳೊಂದಿಗೆ ಬೆಸೆದರು.

"ಕಾಯಕ" ಎನ್ನುವಂಥ ಪದ ಶಿವಶರಣರು ಸುಂದರ ಸಮಾಜ ನಿರ್ಮಾಣಕ್ಕೆ ಕೊಟ್ಟ ಮಹತ್ವ ಕಾಣಿಕೆಯಾಗಿದೆ. "ಕಾಯಕ" ಎನ್ನುವಂಥ ಪದದಲ್ಲಿ ಅವರು ಕಂಡ ಆದರ್ಶ ಕೇವಲ ಒಂದು ಸಮಾಜಕ್ಕೆ, ರಾಷ್ಟ್ರಕ್ಕೆ ಸೀಮಿತವಾಗದೆ, ಇಡಿ ಜಗತ್ತನ್ನೆ ಒಳಗೊಳ್ಳ ಬಲ್ಲಂತಹದ್ದು. ಸಾಮಾನ್ಯವಾಗಿ ವ್ಯಕ್ತಿಯ ದುಡಿಮೆಗೆ ಶರಣರು ಕಾಯಕವೆಂದು ಕರೆದರು. ಈ ಭೂಮಿಯ ಮೇಲೆ ಜಿವಿಸುವ ಪ್ರತಿಯೊಬ್ಬ ವ್ಯಕ್ತಿ ಒಂದಲ್ಲ ಒಂದು ಕೆಲಸವನ್ನು ಮಾಡಲೇಬೇಕಾಗುತ್ತದೆ. ಆದರೆ ಅವನು ಮಾಡುವ ಕೆಲಸವು ಸಮಾಜಕ್ಕೆ ಬಾಧಕವಾಗಿರದೆ ಸಮಾಜಕ್ಕೆ ಉಪಯೋಗವಾಗುವಂತಿರಬೇಕು. ಅಂತ ಕೆಲಸ ಕಾಯಕವೆನಿಸಿಕೊಳ್ಳುತ್ತದೆ ಎಂದು ಶರಣರು ನಂಬಿದ್ದರು. ಹಾಗೆಯೇ ಮಾಡಿ ತೋರಿಸಿದ್ದರು.

ಕೆಲಸವನ್ನು ಮಾಡದವನಿಗೆ ಇನ್ನೊಬ್ಬರ ದುಡಿಮೆಯ ಫಲವನ್ನು ಕುಳಿತು ತಿನ್ನುವ ಹಕ್ಕಿಲ್ಲ ಎಂದು ಭಿಕ್ಷೆ ಬೇಡುವುದನ್ನು ವಿರೋದಿಸುವುದರ ಮೂಲಕ, ಸುಂದರ ಸಮಾಜ ನಿರ್ಮಾಣಕ್ಕಾಗಿ ಪ್ರಯತ್ನಿಸಿದರು ಬೆರೆಯವರ ಹಂಗಿನಲ್ಲಿ ಬಾಳುವ ಜೀವನ ಒಂದು ಜೀವನವೇ ಅಲ್ಲ ಎಂದು ಕಾಯಕ ಸಿದ್ಧಾಂತದ ಅರಿವನ್ನು ಜನ ಸಾಮಾನ್ಯರಲ್ಲಿ ಮೂಡಿಸಿದರು. ವ್ಯಕ್ತಿ ಯಾವುದೇ ಕೆಲಸ ಕೈಗೊಂಡಿರಲಿ ಅದು ಸತ್ಯ ಶುದ್ಧತೆಯಿಂದ ಕೂಡಿದರೆ ಎಲ್ಲಾ ಕಾರ್ಯಗಳು ಸಮಾನ, ಯಾವುದರಲ್ಲಿ ಮೇಲು ಕೀಳುಗಳಿಲ್ಲವೆಂದು ಸಾರುವುದರ ಮೂಲಕ ಸಮಾಜದಲ್ಲಿ ಸಮಾನತೆ ತರಲು ಹಂಬಲಿಸಿದರು.

ವಿವಿಧ ವೃತ್ತಿಯನ್ನು ಕೈಗೊಂಡ ಮಡಿವಾಳ ಮಾಚಯ್ಯ, ನುಲಿಯ ಚಂದಯ್ಯ, ಅಂಬಿಗರ ಚೌಡಯ್ಯ, ಆಯ್ದಕ್ಕಿ ಮಾರಯ್ಯ ಮುಂತಾದ ಶರಣರು ಕಾಯಕದಲ್ಲಿ ತಾರತಮ್ಯವನ್ನು ಕಾಣದೆ, ಕಾಯಕದಲ್ಲಿರುವ ಸತ್ಯ

ಶುದ್ಧತೆಗೆ ಮಹತ್ವ ಕೊಟ್ಟರು. ತಮ್ಮ ಕಾರ್ಯವನ್ನು ನಿಷ್ಠೆಯಿಂದ ಮಾಡುವುದರ ಮೂಲಕ ಕಾಯಕ ಸಿದ್ಧಾಂತಕ್ಕೆ ಹೊಸ ಅರ್ಥವನ್ನು ತಂದು ಕೊಟ್ಟರು ತಾನು ಮಾಡುವ ಕೆಲಸ ದೇವರ ಸೇವೆ ಎಂದು ಬಗೆದರು. ಮತ್ತು ಆ ಕೆಲಸದಲ್ಲಿಯೇ ದೇವರನ್ನು ಕಂಡರು.

'ಕಾಯಕವೇ ಕೈಲಾಸ' ಎಂಬ ನುಡಿ ಅನೇಕ ಶರಣರ ವಚನಗಳ ಕಂಡು ಬಂದರು. ಈ ಕಾಯಕ ಕುರಿತಂತೆ ಮೊದಲಿಗೆ 'ಕಾಯಕ-ಸಿದ್ಧಾಂತ' ಪ್ರತಿಪಾದಿಸಿದ್ದು ಆಯ್ದಕ್ಕಿ ಮಾರಯ್ಯನವರು ಮತ್ತು ಇವರ ಪತ್ನಿ ಲಕ್ಕಮ್ಮ ದಂಪತಿಗಳ ಜೀವನ ದರ್ಶನ ಮಾಡಿದಾಗ ಅವರು ಕಾಯಕಕ್ಕೆ ಕೊಟ್ಟ ಮಹತ್ವ ತಿಳಿಯುತ್ತದೆ. ಹೀಗೆ ಕಾಯಕಕ್ಕೂ ಮತ್ತು ಈ ದಂಪತಿಗಳ ಬದುಕಿಗೂ ಗಾಢವಾದ ಸಂಬಂಧವಿದೆ. ಕಾಯಕವನ್ನು ಒಂದು ಮೌಲ್ಯವನ್ನಾಗಿ ಮಾಡಿ, ಕಾಯಕ ನಿಷ್ಠೆ ಕಲಿಸಿದ ಆಯ್ದಕ್ಕಿ ಲಕ್ಕಮ್ಮ ಬಹುಮಹತ್ವದ ಶರಣೆಯಾಗಿದ್ದಾಳೆ.

ಶರಣ ಸಂಸ್ಕೃತಿಯಲ್ಲಿ ಮಾರಯ್ಯ-ದಂಪತಿಗಳಿಗೆ ಮಹತ್ವದ ಸ್ಥಾನವಿದೆ. ದಾಂಪತ್ಯ ಜೀವನದ ಜೊತೆಗೆ ಆಧ್ಯಾತ್ಮದಲ್ಲಿ ತಮ್ಮನ್ನು ತೊಡಗಿಸಿಕೊಂಡು ಹಲವಾರು ಶರಣ ದಂಪತಿಗಳಲ್ಲಿ ಆಯ್ದಕ್ಕಿ ಮಾರಯ್ಯ- ಲಕ್ಕಮ್ಮ ದಂಪತಿಗಳು ಪ್ರಮುಖವಾಗಿ ಕಂಡು ಬರುತ್ತಾರೆ. ಇವರದು ಅಪರೂಪದ ದಾಂಪತ್ಯ ಬಸವಣ್ಣನವರಿಂದ ಪ್ರಭಾವಿತರಾಗಿ ಈ ದಂಪತಿಗಳು ತಮ್ಮ ಮೂಲ ನೆಲೆಯನ್ನು ತೊರೆದು ಕಲ್ಯಾಣಕ್ಕೆ ಬಂದು ಶರಣರೊಡಗೂಡಿ ಬಾಳುತ್ತಾರೆ. ಬೀದಿಯಲ್ಲಿ ಬಿದ್ದಿರುವ ಕಾಳುಗಳನ್ನು ಆಯ್ದು ತಂದು ಜಂಗಮ ದಾಸೋಹ ನಡೆಸುವುದೇ ಇವರ ಕಾಯಕವಾಗಿತ್ತು ಸಾಂಸರಿಕ ಜೀವನದಲ್ಲಿ ಉಳಿದುಕೊಂಡು ಪಾರಮಾರ್ಥಿಕ ಸಾಧನೆಯಲ್ಲಿ ಸಾಗಿದ್ದರು. ಈ ಶರಣ ದಂಪತಿಗಳು ಒಮ್ಮೆ ಅನುಭವ ಮಂಟಪದಲ್ಲಿ ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ, ಆಯ್ದಕ್ಕಿ ಮಾರಯ್ಯ ಮುಂತಾದ ಅಸಂಖ್ಯಾತ ಶಿವಶರಣರು ಕಾಯಕ ಕುರಿತಂತೆ ಶಿವಾನುಭವ-ಗೋಷ್ಠಿ ನಡೆದಿತ್ತು ಅಂದಿನ ಗೋಷ್ಠಿಯ ವಿಷಯ ಕಾಯಕ ಬಗ್ಗೆ ಚರ್ಚೆ ನಡೆದಿತ್ತು. ಮಾರಯ್ಯ ಗೋಷ್ಠಿಯಲ್ಲಿ ತಲ್ಲೀನರಾಗಿರುತ್ತಾರೆ ಆಗ ಗೋಷ್ಠಿಯ ಅಧ್ಯಕ್ಷರಾದ ಅಲ್ಲಮ ಪ್ರಭುಗಳು ಹೀಗೆ ಪ್ರಶ್ನೆ ಮಾಡುತ್ತಾರೆ. ಮಾರಯ್ಯ ಕಾಯಕದ ಬಗ್ಗೆ ನಿಮ್ಮ ನಿಲುವೇನು?

ಆಗ ಮಾರಯ್ಯ

"ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು.
ಲಿಂಗ ಪೂಜೆಯಾದರು ಮರೆಯಬೇಕು
ಜಂಗಮ ಮುಂದಿದ್ದರೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತಾದಡು ಕಾಯಕದೊಳಗೆ"

ಕಾಯಕವೆಂಬುದು ಮಹಾ ತಪಸ್ಸು ಕಾಯಕ ತತ್ವದ ಮಹಿಮೆ ಹಿರಿದಾದುದು ಕಾಯಕದಲ್ಲಿ ಪ್ರತ್ಯೇಕ್ಷವಾಗಿ ಪರಮಾತ್ಮನನ್ನೇ ಕಾಣಬಹುದು. ಕಾಯಕವೇ ಕೈಲಾಸವೆಂಬ ಅರ್ಥಪೂರ್ಣ ಸೂಕ್ತಿಯನ್ನು ವರಹೊಮ್ಮಿಸಿ ತಮ್ಮ ನಿಲುವನ್ನು ಅನುಭವ ಮಂಟಪದ ಆ ಅನುಭವದ ಸಭೆಯಲ್ಲಿ ಸ್ಪಷ್ಟಪಡಿಸಿದರು. ಎಂಥಹ ಅದ್ಭುತ ಮಾತಿದು ಅನುಭವ

ಮಂಟಪದಲ್ಲಿದ್ದವರಿಗೆ ಈ ಮಾತನ್ನು ಕೇಳಿ ಕಿವಿ ನಿಮಿರಿದವು. ಹೀಗೆ ಮಾರಯ್ಯನವರಿಗೆ ಸಮಯ ಅರಿವಾಗದೆ ಹಾಗೆಯೇ ಗೋಷ್ಠಿಯಲ್ಲಿ ತಲ್ಲೀನರಾಗಿರುತ್ತಾರೆ.

ಸರ್ವಸಮರ್ಪಣ ಭಾವ ಕಾಣಿಸುತ್ತದೆ. ತನ್ನನ್ನು ಸಂಪೂರ್ಣವಾಗಿ ಕಾಯಕದಲ್ಲಿ ತೊಡಗಿಸಿಕೊಂಡವನ ಕಾಯಕ ನಿಷ್ಠೆ ವಿಶಿಷ್ಟವಾದುದು. ಆದರೆ ಮಾನವ ಸ್ವಭಾವ ವಿಚಿತ್ರವಾದುದು. ತಾನು ಕಾಯಕ ಮಾಡುವುದಂತೂ ದೂರ. ಮಾಡುವವನನ್ನು ಕೆಡಿಸಲು ವಂಚು ಹಾಕುವ ವಂಚಕರೆ ಹೆಚ್ಚು. ಇಂಥ ಪರಿಸರದಲ್ಲಿ ಯಾವ ಬಗೆಯ ನಿಷ್ಠೆಯನ್ನು ಕಾಣಲು ಸಾಧ್ಯವಾದಿತು? ತಾನು ಮೈಮುರಿದು ದುಡಿಯದವನು ಮತ್ತೊಬ್ಬನ ಗೊಡುವೆಗೆ ಹೋಗಬೇಕೆಕೆ? ಅವನೆಷ್ಟು ಕೆಲಸ ಮಾಡಿದರೇನು ಬಿಟ್ಟರೇನು ಅವನಿಗೆ ಸಂಭಧಿಸಿದ ವಿಷಯ ಆದರೆ ಇವತ್ತಿನ ದಿನಮಾನದಲ್ಲಿ ಅಯಕ್ಕೆ ಮಾಯಯ್ಯನಂತೆ ಜೀವನವಿಧಾನವನ್ನು ಆಯ್ಕೆ ಮಾಡಿಕೊಳ್ಳು ಅಗತ್ಯವಿದೆ.

ಕಾಯಕದಲ್ಲಿ ನಿರತನಾದಮೇಲೆ ಮುಂದೆ ಯಾರೇ ಬಂದರು ಹಂಗುಹರಿದು ಮಾಡುವ ದೋರಣೆ ಕ್ರಾಂತಿಕಾರಿಯಾದುದು. ಅವನ ವೈಚಾರಿಕತೆ ನಿಲುವು ವಂದನೆಗೆ ಪಾತ್ರವಾಗುವಂತದು ಅವನಿಗೆ ಗುರು ಲಿಂಗ-ಜಂಗಮ ಎದುರಾಗಿದ್ದಾರೆ. ಅವರಿಗಿಂತ ಅವನಿಗೆ ತನ್ನ ಕಾಯಕದಲ್ಲಿ ನಿಷ್ಠೆ ನಂತರದಲ್ಲಿ ಇವರ ಸೇವೆ ಅದನ್ನು ಅವನೇ ಒಪ್ಪಿಕೋಳ್ಳುತ್ತಾನೆ. ಅಮರೇಶ್ವರ ಲಿಂಗ ಕೂಡ ಕಾಯಕದೋಳಗೂ ಎಂದು  ಹೇಳಿರುವುದಂತು ಅವನು ಕಾಯಕವನ್ನು ಎಂಥ ಎತ್ತರ ಭಿತ್ತರಗಳಿಗೆ ಮುಟ್ಟಿಸಿರುವನೆಂಬುದಕ್ಕೆ ಸಾಕ್ಷಿಯಾಗಿದೆ ಹೀಗೆಯೇ ಮಾರಯ್ಯನವರಿಗೆ ಸಮಯ ಅರಿವಾಗದೆ ಹಾಗೆಯೆ ಗೋಷ್ಠಿಯಲ್ಲಿ ತಲ್ಲೀನರಾಗಿರುತ್ತಾರೆ ಕಾಯಕದ ಸಮಯ ಮಿರಿದ್ದರು ಇನ್ನು ಮನೆಗೆ ಬರದ ಪತಿಯ ಬಗ್ಗೆ ಲಕ್ಕಮ್ಮ ಬಹಳ ಕಳವಳಗೊಳ್ಳುತ್ತಾಳೆ. ಇಲ್ಲಿ ಲಕ್ಕಮಳ ಸಮಯಪ್ರಜ್ಞೆ, ಕಾಯಕನಿಷ್ಠೆ ವ್ಯಕ್ತವಾಗುತ್ತದೆ. ಕೊನೆಗೆ ತನ್ನ ಪತಿಯ ಇಂದಿನ ಕಾಯಕ ಮತ್ತು ದಾಸೋಹ ನಿಲ್ಲುತ್ತವೆಂದು ವಿಚಾರಿಸಿ ಗಂಡನಿಗೆ ಎಚ್ಚರಿಸಬೇಕೆಂದು ಸ್ವತಃ ತಾನೆ ಸರಸರನೆ ಅನುಭವ ಮಂಟಪಕ್ಕೆ ಬರುತ್ತಾಳೆ. ಅನುಭವ ಮಂಟಪದೊಳಗೆ ಬಂದು, ಶಿವಶರಣರಿಗೆ ಎಚ್ಚರಿಸುವುದು ಅತ್ಯಂತ ವಿನುತನವಾಗಿದೆ.

"ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳನೆ.
ಭಾವ ಶುದ್ಧವಾಗಿ ಮಹಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು
ನಿಶ್ಚಿಸಿ ಮಾಡಬೇಕು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ
ಬೇಗ ಹೋಗೂ ಮಾರಯ್ಯ"

'ಎನ್ನಳ್ದನೆ ಎಂಬ ಹಿತನುಡಿಯಿಂದ ಎಚ್ಚರಿಸುವಲ್ಲಿ ಲಕ್ಕಮ್ಮಳ ವ್ಯಕ್ತಿತ್ವ ಘನತೆ ವ್ಯಕ್ತವಾಗುತ್ತದೆ. ಸಾಧರಣವಾಗಿ ಕಾಯಕಕ್ಕೆ ತಡವಾಗಿದೆ ಎಂದು ಲಕ್ಕಮ್ಮ ಹೇಳಿದರೆ ಅದು ಆಜ್ಞೆಯಾಗುತ್ತಿತ್ತು. ಆದರೆ ಲಕ್ಕಮ್ಮ ಹಾಗೆ ಹೇಳದೆ ಎನ್ನಾಳನೆ ಎಂದು ಪ್ರೀತಿಯಿಂದ ಗಂಡನಿಗೆ ಎಚ್ಚರಿಸಿದ್ದು ಮಹತ್ವವಾಗಿ ಕಂಡು ಬರುತ್ತದೆ. ತುಂಬಿದ ಜನರ ನಡುವೆ ಹೀಗೆ ತನ್ನ ಗಂಡನಿಗೆ ಅಂದರೆ ಅವರೇನೆಂದುಕೊಂಡರು ಎಂಬ ಅನುಮಾನವನ್ನು ಆಕೆ ಪಡಲಿಲ್ಲ. ಅಷ್ಟು ಸ್ವಾತಂತ್ರ, ಅಂದಿನ ಮಹಿಳೆಯರಿಗೆ ಸಿಗುವಂತೆ ಮಾಡಿದ್ದರು.

ಹೀಗಾಗಿ ಲಕ್ಕಮ್ಮನನ್ನು ಯಾರೂ ಬೇರೆ ಭಾವನೆಯಿಂದ ಕಾಣಲಿಲ್ಲ ಇದು ಒಟ್ಟು ಸಮಾಜದ ಅರಿವಾಗಿತ್ತು ಲಕ್ಕಮ್ಮಳಲ್ಲಿರುವ ಜ್ಞಾನ, ಕಾಯಕ ನಿಷ್ಠೆ, ಸಮಯ ಪ್ರಜ್ಞೆಗಳನ್ನು ಕಂಡು ಶಿವಶರಣರಿಗೆಲ್ಲ ಅತ್ಯಾನಂದವಾಗುತ್ತದೆ. ಮಾರಯ್ಯನಿಗೆ ಲಕ್ಕಮಳ ಮಾತಿನಿಂದ ಬಹಳ ಆನಂದವಾಗುತ್ತದೆ. ಈ ಸಂಧರ್ಭವನ್ನು ಅವಲೋಕಿಸಿದಾಗ ಈ ದಂಪತಿಗಳಲ್ಲಿ ಎಳ್ಳಷ್ಟು ವಿಷಮತೆ ಕಂಡು ಬರುವುದಿಲ್ಲ.

ಅನುಭವ ಗೋಷ್ಟಿಯಲ್ಲಿ ಅಸಂಖ್ಯಾತ ಶಿವಶರಣರೆದುರಿಗೆ ನನ್ನ ಪತ್ನಿ ಕಾಯಕಕ್ಕೆ ತಡವಾಗಿದೆ ಹೋಗು ಎಂದು ಅಜ್ಞಾಪಿಸಿದಳಲ್ಲಾ ಎಂದು ಮಾರಯ್ಯ ಅಸಮಾಧಾನಗೊಳ್ಳದೆ, ಹೆಂಡತಿ ತನಗೆ ಅರಿವು ಮರೆತಾಗ ಎಚ್ಚರಿಸಿದಳಲ್ಲಾ ಎಂದು ಅತ್ಯಾನಂದದಿಂದ ಹೆಂಡತಿಯ ಸಲಹೆಯಂತೆ ಸಂತೋಷದಿಂದ ಕಾಯಕಕ್ಕೆ ಹೊರಾಡುತ್ತಾನೆ ಇದು ಮಾರಯ್ಯನ ಮಹೋನ್ನತ ವ್ಯಕ್ತಿತ್ವಕ್ಕೆ ಹೀಗೆಯೆ ಮಾರಯ್ಯ ಕಾಯಕಕ್ಕೆ ತಡವಾಯಿತ್ತೆಂದು ಸರಸರನೆ ಶರಣರ ಅಂಗಳಕ್ಕೆ ಬರುತ್ತಾನೆ. ಕಾಯಕಕ್ಕೆ ತಡವಾಗಿದೆ ಪಾಪ ಅಕ್ಕಿ ಆಯ್ದು ತರಲು ಕಷ್ಟವೆಂದು ಬಗೆದು ಬಸವಣ್ಣನವರು ಹೆಚ್ಚು ಅಕ್ಕಿ ಅಂಗಳದಲ್ಲಿ ಚೆಲ್ಲಿಸುತ್ತಾರೆ. ಯಾವುದನ್ನು ವಿಚಾರಿಸದೆ ಮಾರಾಯ್ಯ ಅಕ್ಕಿಯನ್ನು 'ಆಯದೆ ಬಳಿದು' ತರುತ್ತಾನೆ. ಗಂಡ ತಲೆಯ ಮೇಲೆ ದೊಡ್ಡದಾದ ಮೂಟೆ ತರುವುದನ್ನು ಕಂಡ ಲಕ್ಕಮ್ಮ ಹೆದರುತ್ತಾಳೆ. ನನ್ನ ಪತಿ ಎಂದಿಗಿಂತ ಇಂದೇಕೆ ಇಷ್ಟೊಂದು ಹೆಚ್ಚಾಗಿ ಅಕ್ಕಿ ತರುತ್ತಿದಾರೆಂದು ಚಿಂತಿಸುತ್ತಾ ತನ್ನ ಗಂಡ ತಂದ ಅಕ್ಕಿಯನ್ನು ಹರ್ಷದಿಂದ ಇಟ್ಟುಕೊಳ್ಳದೆ ಮಾರಯ್ಯ ನನ್ನು ಹಲವಾರು ಪ್ರಶ್ನೆಗಳನ್ನೇ ಕೇಳುತ್ತಾಳೆ.

" ಆಸೆಯೆಂಬುದು ಅರಸಿಂಗಲ್ಲದೆ,<br>
ಶಿವಭಕ್ತರಿಗುಂಟೆ ಅಯೋ ?<br>
ರೋಷವೆಂಬುದು ಯಮದೂತರಿಗಲ್ಲದೆ,<br>
ಅಜಾತರಿಗುಂಟೆ ಅಯ್ಯಾ?<br>
ಈ ಸಕ್ತಿಯಾಸೆ ನಿಮಗೇಕೆ? ಈಶ್ವರನೊಪ್ಪ<br>
ಮಾರಯ್ಯಾ ಪ್ರಿಯ ಅಮರೇಶ್ವರ ಲಿಂಗಕ್ಕೆ ದೂರ ಮಾರಯ್ಯ"

ಆಸೆ ಎನ್ನುವುದು ರಾಜನಿಗೆ ಇರಬಹುದೇ ಹೊರತು ನಮ್ಮಂತಹ ಶಿವಭಕ್ತರಿಗಲ್ಲ, ಎಂದು ತನ್ನ ಪತಿಗೆ ತಿಳಿವು ಮೂಡಿಸುತ್ತಾಳೆ. ನಾಳೆಗಾಗಿ ನಾವು ಚಿಂತಿಸಬಾರದು ನಾವು ಆಸೆಗೆ ಹತ್ತಿರವಾದಷ್ಟು ದೇವರಿಂದ ದೂರವಾಗುತ್ತೇವೆ. ಇದನ್ನು ಈಶ್ವರನು ಒಪ್ಪುವುದಿಲ್ಲ ಎಂದು ಲಕ್ಕಮ್ಮ ಗಂಡನಿಗೆ ತಿಳಿಸಿ ಹೇಳುವಲ್ಲಿ ಅವಳ ವ್ಯಕ್ತಿತ್ವ ಗಮನಕ್ಕೆ ಬರುತ್ತದೆ. ಹೆಚ್ಚಾದ ಅಕ್ಕಿಯನ್ನು ತರುವ ಆಶೆ ನಿಮಗೇಕೆ ಬಂದಿತ್ತು ಇಂಥ ಕಿರು ಬುದ್ದಿ ಎಂದು ಮುಂದುವರಿದು ಲಕ್ಕಮ್ಮ ಇಗೆ ಕೇಳುತ್ತಾಳೆ.

"ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ<br>
ಇದು ನಿಮ್ಮ ಮನವೋ, ಬಸವಣ್ಣನ ಅನುಮಾನದ ಚಿತ್ತವೋ?<br>
ಈ ಮಾತು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ ಸಲ್ಲದ ಭೋನ<br>
ಅಲ್ಲಿಯೇ ಸುರಿದು ಬನ್ನಿ ಮಾರಯ್ಯ"

ದಿನಾಲು ತರುವ ಅಕ್ಕಿಗಿಂತ ಇಂದೇಕೆ ಇಷ್ಟು ಹೆಚ್ಚು ಅಕ್ಕಿಯನ್ನು ತಂದಿದ್ದೀರಿ ಮಾರಯ್ಯ? ಹೀಗೆ ತರಲು ನಿಮ್ಮ ಮನಸ್ಸು ಕಾರಣವೋ ಅಥವಾ ಬಸವಣ್ಣನವರ ಅನುಮಾನದ ಚಿತ್ತವೋ? ಎಂದು ಮಾರಯ್ಯನಿಗೆ ಮತ್ತೆ ಪ್ರಶ್ನಿಸುತ್ತಾಳೆ ಲಕ್ಕಮ್ಮ. ಇನ್ನೂ ಆಶ್ಚರ್ಯವೆಂದರೆ ಆಕೆಗೆ ತನ್ನ ಗಂಡನ ಮೇಲೆ ವಿಶ್ವಾಸವಿದ್ದ ಲಕ್ಕಮ್ಮ ಬಸವಣ್ಣನವರು ಹೀಗೆ ಮಾಡಿದ್ದಾರೆ ಎಂದು ಅರಿತುಕೊಳ್ಳುತ್ತಾಳೆ. ಶಿವ ಭಕ್ತರಾದ ತಮಗೆ ಬಡವರೆಂದು ತಿಳಿದ ಬಸವಣ್ಣನವರು ಹೆಚ್ಚಾದ ಅಕ್ಕಿಯನ್ನು ಚೆಲ್ಲಿಸಿದ್ದಾರೆ. ಮಹಾತ್ಮರಾರು ಹೀಗೆ

ವಿಚಾರಿಸಬೇಕೆ? ಸತ್ಯ ಶುದ್ಧ ಕಾಯಕ ನಿತ್ಯ ದಾಸೋಹ ಹಾಗೂ ಅಮರೇಶ್ವರನು ನಮ್ಮಲ್ಲಿರುವವರೆಗೆ ನಾವು ಬಡವರಲ್ಲ ನಮಗೆ ಯಾರ ಹಂಗೂ ಬೇಕಾಗಿಲ್ಲ. ನೀನು ತಂದ ಅಕ್ಕಿಯ ಬೋನ ಆ ದೇವರಿಗೆ ಅರ್ಪಿತವಾಗುವುದಿಲ್ಲ. ಅಲ್ಲಿಯೇ ಸುರಿದು ಬನ್ನಿ ಎಂದು ಆಜ್ಞಾಪಿಸುತ್ತಾಳೆ. ಅಷ್ಟೇಯಲ್ಲದೆ ನಮ್ಮ ಬಡತನದ ಬಗ್ಗೆ ಸಂದೇಹ ಪಟ್ಟಿರಲ್ಲಾ ಬಸವಣ್ಣನವರು, ಆದಕ್ಕೆ ಈ ಅಕ್ಕಿಯನ್ನು ತಂದ ಸ್ಥಳದಲ್ಲಿಯೇ ಸುರಿದು ಬರುವಾಗ ಎಲ್ಲಾ ಶರಣ ಸಮೂಹಕ್ಕೆ ಇಂದು ನಮ್ಮ ಮನೆಯಲ್ಲಿ ಪ್ರಸಾದಕ್ಕೆ ಬಿನ್ನಹವನ್ನು ಕೊಟ್ಟು ಬನ್ನಿ ಎಂದು ಹೇಳುತ್ತಾಳೆ.

ಲಕ್ಕಮಳ ಈ ಮಾತುಗಳಲ್ಲಿರುವ ಹೆಚ್ಚು, ಧೈರ್ಯ ಮೆಚ್ಚುವಂಥದ್ದು ಬಸವಣ್ಣನವರ ಸಂದೆಹವೇ ಸವಾಲಾಗಿ ಸ್ವೀಕರಿಸಿ ಶಿವ ತತ್ವದ ಸ್ವಾಭಿಮಾನವನ್ನು ಮೆರೆದ ಲಕ್ಕಮಳ ಧೈರ್ಯ ಅಸಾಧಾರಣವಾದದ್ದು ಮಡದಿಯ ಮಾತು ವೇದ ವಾಕ್ಯವೆಂದು ಮಾರಯ. ನಂಬಿದ್ದನು. ಹಾಗೆ ಲಕ್ಕಮಳ ವಿಚಾರದಂತೆ ಅಕ್ಕಿಯನ್ನು ಸುರಿದು ಬುರುತ್ತಾ, ಅನುಭವ ಮಂಟಪದಲ್ಲಿರುವ ಎಲ್ಲಾ ಶಿವಶರಣರಿಗೆ ತಮ್ಮ ಮನೆಗೆ ಪ್ರಸಾದಕ್ಕೆ ಬರಬೇಕೆಂದು ಬಿನ್ನಯಿಸಿ ಬರುತ್ತಾನೆ.

ಮಾರಯ್ಯನು ತಮ್ಮ ಮನೆಗೆ ಲಕ್ಷದ ತೊಂಬತ್ತಾರು ಸಾವಿರ ಜಂಗಮರಿಗೆ ಬಿನ್ನಹಕ್ಕೆ ಕರೆದುದನ್ನು ಕೇಳಿದ ಬಸವಣ್ಣ ಮೊದಲು ಸಂದೇಹ ಪಡುತ್ತಾರೆ. ಆದರೂ ಎಲ್ಲಾ ಶರಣರೂ ಕೂಡಿ ಮಾರಾಯ್ಯನ ಮನೆಗೆ ಪ್ರಸಾದಕ್ಕೆ ಬರುತ್ತಾರೆ. ಬಂದ ಎಲ್ಲಾ ಶರಣರ ಸಮೂಹವನ್ನು ಲಕ್ಕಮ್ಮ ಆದರದಿಂದ ಬರ ಮಾಡಿಕೊಳ್ಳುತ್ತಾಳೆ. ಆಯ್ದು ತಂದ ಅಕ್ಕಿಯಿಂದಲೇ ಸಾಕು ಎನ್ನುವಷ್ಟರ ಮಟ್ಟಿಗೆ ಅವರಿಗೆ ಪ್ರಸಾದ ಊಣ ಬಡಿಸುತ್ತಾಳೆ. ಶರಣರೆಲ್ಲರೂ ಪ್ರಸಾದವಕೊಂಡು ಸಂತೃಪ್ತರಾಗುತ್ತಾರೆ. ಸಂತೋಷದ ಜೊತೆಗೆ ಅವರಿಗೆ ಆಶ್ಚರ್ಯವಾಗುತ್ತದೆ. ಪ್ರಸಾದದಿಂದ ಸಂತೃಪ್ತಗೊಂಡ ಬಸವಣ್ಣನವರು ತಾನು ಸಂದೇಹಪಟ್ಟದ್ದು ತಪ್ಪೆಂದು ಅರಿವಾಗಿ ಪಶ್ಚಾತಾಪ ಪಡುತ್ತಾರೆ. ಮಾರಾಯ್ಯ ಲಕ್ಕಮ್ಮ ದಂಪತಿಗಳ ಭಕ್ತಿ ಭಾವವನ್ನು ಕುರಿತು ಮನಸ್ಪೂರ್ತಿಯಾಗಿ ತುಂಬಿ ನುಡಿಯುತ್ತಾರೆ.

ಮನೆ ನೋಡಾ, ಬಡವರು,

ಮನ ನೋಡಾ ಸಂಪನ್ನರು

ಧನ ನೋಡಾ ಬಡವರು,

0

ಘನ ಮನ ಸಂಪನ್ನರು

ಕೂಡಲ ಸಂಗಮ ಶರಣರು ಕರುಳಿಲ್ಲದ ಕಲಿಗಳು"

ಎಂದು ಕೊಂಡಾಡುತ್ತಾರೆ. ಮಾರಯ್ಯ ದಂಪತಿಗಳು ಈ ನುಡಿಗಳು ಕೇಳಿ ಈ ಶಕ್ತಿ ಭಕ್ತಿಯಲ್ಲವೂ ಶರಣರ ಕೃಪೆ ಎನ್ನುತ್ತಾರೆ. ಹೀಗೆ ಮಾರಯ್ಯನಿಗೆ ಅಡಿಗಡಿಗೆ ಭಕ್ತಿ ಮಾರ್ಗದಲ್ಲಿ ಮುನ್ನಡೆಸಿ, ಜಂಗಮ ಸೇವೆಯೇ ಅಮರೇಶ್ವರನ ಸೇವೆಯೆಂದು, ದಂಪತಿಗಳ ಜಂಗಮರ ದಾಸೋಹವನ್ನು ಮೆಚ್ಚಿದ ಪ್ರಭುಗಳುಇವರ ಮಧುರ ದಾಂಪತ್ಯವನ್ನು ಕುರಿತಂತೆ ಪ್ರಭುಗಳು ಈ ಕೆಳಗಿನಂತೆ ಪ್ರಶಂಸಿದ್ದಾರೆ.

"ಉಭಯ ದೃಷ್ಟಿ ಏಕ ದೃಷ್ಟಿಯಲ್ಲಿ ಕಾಂಬಂತೆ
ದಂಪತಿ ಏಕ ಭಾವವಾಗಿ ನಿಂದಲ್ಲಿ
ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯ್ತು ಸಂಗನಬಸವಣ್ಣಾ"

ಮಾರಯ್ಯನಿಗೆ ಸತಿಯ ಬಗ್ಗೆ ಅಪರ ಗೌರವ ತನ್ನ ಸತಿಯನ್ನು ಕೇವಲ ಸತಿಯೆಂದು ಭಾವಿಸದೆ ಗುರುವೆಂದು ಭಾವಿಸಿದ್ದನ ಈ ದಂಪತಿಗಳ ಮಧುರ ಸ್ನೇಹದಲ್ಲಿ ಮೇಲು-ಕೀಳೆಂಬುದು ಹತ್ತಿರವೂ ಸೂಳಿಯಲಿಲ್ಲ ಎಂಬುದಕ್ಕೆ ಇವರ ದಾಂಪತ್ಯವೇ ಉತ್ತಮ ನಿದರ್ಶನ. ಹೀಗೆ ಮಾರಯ್ಯನವರ ಮನೆಯ ರುಚಿಯಾದ ಪ್ರಸಾದವನ್ನು ಸ್ವೀಕರಿಸಿದ ಶರಣರು, ಮಾರಯ್ಯನ ದಾಸೋಹದ ಬಗ್ಗೆ ಮೆಚ್ಚುಗೆ ಮಾತನಾಡುತ್ತಾರೆ. ಆಗ ಮಾರಯ್ಯನವರು ಈ ವಚನವನ್ನು ಪ್ರಸ್ತಾಪಿಸುತ್ತಾರೆ.

"ಎನಗೆ ಮನೆ ಇಲ್ಲ. ಎನಗೆ ಧನವಿಲ್ಲ.
ಮಾಡುವುದೇನು?ನೀಡುವುದೇನು?
ಮನೆಧನ ಸಕಲ ಸಂಪದ ಸೌಖ್ಯವುಳ್ಳ
ನಿಮ್ಮ ಶರಣರ ತಪ್ಪುಲಕ್ಕಿಯ ನಾಯ್ದು ತಂದು,
ಎನ್ನೊಡಲ ಹೊರೆವೆನಾಗಿ,
ಅಮರೇಶ್ವರಲಿಂಗಕ್ಕೆ ನೀಡುವ ಬಯಕೆ ಎನಗಿಲ್ಲ ಸಂಗನಬಸವಣ್ಣಾ"

"ಬಸವಣ್ಣನವರೆ, ಅಲ್ಲಮಪ್ರಭುಗಳೆ ನಿಮ್ಮ ಹೊಗಳಿಕೆಗೆ ನಾವು ಪಾತ್ರರಲ್ಲ ನೀಡಲು ಏನಿದೆ? ಎಂದು ಹೇಳುವಿರಿ. ಈ ಶರೀರ ಕೊಡಬೇಕು. ಆದರೆ ಇದು ನನ್ನದಲ್ಲ, ಗುರುವಿಗೆ ನೀಡಲಾಗಿದೆ. ಮನವೇನಾದರೂ ನನ್ನದೆನ್ನಲೇ ಲಿಂಗಾರ್ಪಿತವಾಗಿದೆ. ಇನ್ನು ಧನ ಏನಿತ್ತೊ ಏನಿಲ್ಲೋ ಇದ್ದುದು ಜಂಗಮಕ್ಕೆ ಸೇರಿತು ತನು, ಮನ, ಧನವಿಲ್ಲದ ಮೇಲೆ ಕೊಡಲೆನಿದೆ? ನಿಮ್ಮ ಶರಣರು ತನು ಮನ ಧನ ಸಂಪನ್ನರು, ಬೇಡಿದುದು ಶಿವನಿಗಾದರೂ ಕೂಡಬಲ್ಲರು ಅಂತಹ ಮಹಿಮೆಯುಳ್ಳವರಿಗೆ ಎಲ್ಲೊ ಅವರ ತೀಪ್ಪೆಯ ಬಳಿ ಬಿದ್ದ ಅಕ್ಕಿಯ ಕಾಳಾಯ್ದು ತಂದು ಗಂಜಿ ಕಾಸಿಕೊಂಡು ಬದುಕುವ ನಮಗೆ ಅಮರೇಶ್ವರ ಲಿಂಗದ ಶರಣರಿಗೆ ನೀಡುವ ಬಯಕೆ ಎಲ್ಲಿಯದಯ್ಯಾ" ಇಲ್ಲಿ ಮಾರಯ್ಯನವರ ವಿನಯತೆಯ ಮಾತುಗಳು ಅವರ ವ್ಯಕ್ತಿತ್ವವನ್ನು ಇನ್ನಷ್ಟು ಎತ್ತರಕ್ಕೆ ಒಯ್ಯುತ್ತವೆ. ತಮ್ಮ ಶರೀರವೇ ಗುರುಲಿಂಗ-

ಜಂಗಮಕ್ಕೆ ಅರ್ಪಿತವಾದ ಬಳಿಕ ನಾವು ಮಾಡುವುದೇನು? ನಾನು ಏನಾದರೂ ಮಾಡಿದರು ಅದು ಗುರುಲಿಂಗ ಜಂಗಮವೇ ಮಾಡಿದಂತೆ ಎಂದು ಕಾಯಕದ ಮಹತ್ವ ಎತ್ತಿಹಿಡಿದಿದ್ದಾರೆ.

ಹೀಗೆ ಎಲ್ಲಾ ಶರಣರ ವಚನಗಳಲ್ಲಿಯೂ ಮೂಡಿ ಬಂದ ಕಾಯಕ ಕಲ್ಪನೆಯನ್ನು ಗಮನಿಸಿದರೆ ಎಲ್ಲರಲ್ಲಿಯೂ ಕಾಯಕದ ಕಾಳಜಿ ಇದ್ದರೂ ಕೂಡಾ ಮಾರಯ್ಯ ಲಕ್ಕಮ್ಮ ದಂಪತಿಗಳಲ್ಲಿ, ಕಾಯಕದ ಕಾಳಜಿ ವಿಶಿಷ್ಟವಾಗಿ ಕಂಡುಬರುತ್ತದೆ. 'ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗು" ಎಂಬ ಮಾತಿನಲ್ಲಿ ಕಾಯಕದ ವಿಶೇಷತೆ ಅಡಗಿದೆ. ಎಲ್ಲಾ ವಚನಕಾರರ ವಚನಗಳಲ್ಲಿ ಕಾಯಕದ ವಿಷಯ ಅಡಕವಾಗಿದ್ದರೆ ಈ ದಂಪತಿಗಳ ಜೀವನವೇ ಕಾಯಕದ ಮಹತ್ವವನ್ನು ತಿಳಿಸಿಕೊಡುವಂತದ್ದಾಗಿದೆ.

**ಆಧಾರ ಗ್ರಂಥಗಳು**

1. ಶರಣ ಜೀವನ : ಡಾ|| ಜಯಶ್ರೀ ದಂಡೆ
2. ಅಂಬೇಡ್ಕರ ಬಸವಣ್ಣ : ಡಾ.ಜಯದೇವಿ ಗಾಯಕವಾಡ
3. ಶಿವಶರಣೆಯರು-ಪ್ರಸ್ತುತ ಸಂದರ್ಭ : ಡಾ ವಿಜಯಶ್ರೀ ಸಬರದ
4. ಬಸವಣ್ಣನವರ ವಚನಗಳು : ಎಲ್ ಬಸವರಾಜು
5. ವಿಚಾರ ಸಾಹಿತ್ಯ : ಡಾ. ಎಂ. ಹೊರಿಕೇರಿ.